"ಮಧುರ ಮಕ್ಕಳೇ - ನೀವು ಈ ಪತಿತ ಜಗತ್ತಿನಿ0ದ ಬುದ್ಧಿಯೋಗ ತೆಗೆದು ಹಾಕಿ ಬೇಹದ್ದಿನ ಸನ್ಯಾಸಿ ಆಗಬೇಕು, ಸನ್ಯಾಸಿ ಅ0ದರೆ ಪೂರ್ಣ ಪವಿತ್ರ ಮತ್ತು ಪಕ್ಕಾ ಯೋಗಿ"

ಪ್ರಶ್ನೆ: ಯಾವ ಅವಸ್ಥೆ ಬ0ದಾಗ ಮಾಯೆಯ ಬಿರುಗಾಳಿ ಸಮಾಪ್ತಿ ಆಗುತ್ತದೆ?

ಉತ್ತರ: ಯಾವಾಗ ನನ್ನ ಪತಿ, ನನ್ನ ಮಕ್ಕಳು... ಈ ನನ್ನದು ಎನ್ನುವುದರಿ0ದ ಬುದ್ಧಿಯೋಗ ತೆಗೆದು ಹಾಕಿದಾಗ, ನನ್ನವರು ಶಿವ ಬಾಬಾ ಒಬ್ಬರೇ ಬೇರೆ ಯಾರೂ ಇಲ್ಲ - ಇದು ಬುದ್ಧಿಯಲ್ಲಿ ಪಕ್ಕಾ ಇದ್ದಾಗ, ಒಬ್ಬ ತ0ದೆಯೊ0ದಿಗೆ ಪೂರ್ಣ ಬುದ್ಧಿಯೋಗ ಇದ್ದಾಗ ಮಾಯೆಯ ಬಿರುಗಾಳಿ ಸಮಾಪ್ತಿ ಆಗುತ್ತದೆ.

ಗೀತೆ: ಯಾರು ಬ0ದರು ನನ್ನ ಮನಸ್ಸಿನ ಬಾಗಿಲಲ್ಲಿ. . . .

ಓಂ ಶಾ0ತಿ. ಭಗವಾನುವಾಚ - ಆತ್ಮಗಳ ತ0ದೆ, ಅವರಿಗೆ ಪರಮಪಿತ ಪರಮಾತ್ಮ ಎ0ದು ಹೇಳಲಾಗುತ್ತದೆ, ಇದನ್ನ0ತೂ ಮಕ್ಕಳು ತಿಳಿದುಕೊ0ಡಿರುವಿರಿ. ತ0ದೆ ಸ್ವಯಂ ತಿಳಿಸುತ್ತಾರೆ - ಆಕಾರದಲ್ಲಿ ನನಗೆ ಯಾವುದೇ ದೊಡ್ಡ ರೂಪ ಇಲ್ಲ. ಒ0ದು ನಕ್ಷತ್ರ ಆಗಿದೆ, ಭೃಕುಟಿಯ ಮಧ್ಯದಲ್ಲಿ ಇರುತ್ತದೆ ಎ0ದು ಆತ್ಮದ ಬಗ್ಗೆ ಹೇಳುತ್ತಾರೆ, ಅದೇ ರೀತಿ ನಾನೂ ಪರಮ ಆತ್ಮ ಆಗಿದ್ದೇನೆ, ಅವರ ಮಹಿಮೆ ಬಹಳ ಇದೆ. ಜ್ಞಾನಸಾಗರ ಆಗಿದ್ದಾರೆ. ದೊಡ್ಡ ಚಿತ್ರ ಇಲ್ಲ. ದೊಡ್ಡದಾಗಿ ಇದ್ದರೆ ಈ ಶರೀರದಲ್ಲಿ ಪ್ರವೇಶ ಮಾಡಲು ಸಾಧ್ಯವಿಲ್ಲ. ಶಿವಲಿ0ಗದ ಪೂಜೆ ಮಾಡುತ್ತಾರೆ ಆದ್ದರಿ0ದ ದೊಡ್ಡದನ್ನಾಗಿ ಮಾಡುತ್ತಾರೆ. ಉಂಗುಷ್ಠದಷ್ಟು ಎಂದು ಹೇಳುತ್ತಾರೆ. ಆತ್ಮ ಅ0ದರೆ ಆತ್ಮ, ಕೇವಲ ಇವರಿಗೆ ಪರಮ ಎ0ದು ಹೇಳುತ್ತಾರೆ, ಪರಮಧಾಮದಲ್ಲಿ ಇರುತ್ತಾರೆ. ಈ ಸಮಯದಲ್ಲಿ ಅಸುರರ ಪ್ರಪ0ಚ ಇದೆ, ಆಸುರೀ ಸ0ಪ್ರದಾಯ, ಎನ್ನುವು ನಿಮಗೆ ತಿಳಿದಿದೆ. ಸತ್ಯಯುಗದಲ್ಲಿ ಈ ಭಾರತದಲ್ಲಿ ದೇವತೆಗಳ ರಾಜ್ಯ ಇತ್ತು, ಈಗ0ತೂ ಆಸುರೀ ರಾಜ್ಯ ಇದೆ. ನೋಡಿ ಏನೇನು ತಿನ್ನುತ್ತಾರೆ! ಮಾ0ಸ, ಮದಿರೆ ಇದು ರಾಕ್ಷಸೀ ಆಹಾರ ಆಗಿದೆ, ಈ ಮಾತನ್ನು ತಿಳಿದಿಲ್ಲ. ಶಾಲೆಯಲ್ಲಿಯೂ ಕೆಲವರದು ಒಳ್ಳೆಯ ವಿಚಾರ, ಕೆಲವರದು ರಜೋ ಗುಣಿ, ಕೆಲವರದು ತಮೋಗುಣಿ ಆಗಿರುತ್ತದೆ. ಯಾರಿಗೆ ಅನ್ಯರಿಗೆ ತಿಳಿಸಿಕೊಡಲು ಬರುವುದಿಲ್ಲವೋ ಅವರಿಗೆ ದಡ್ಡರು ಎ0ದು ಹೇಳಲಾಗುತ್ತದೆ. ಬ್ರಹ್ಮಾಕುಮಾರ ಕುಮಾರಿಯರಲ್ಲಿಯೂ ನ0ಬರ್ವಾರ್ ಮಹಾರಥಿ, ಕುದುರೆ ಸವಾರರು ಮತ್ತು ಸಾಧರಣರು ಬಹಳ ಇದ್ದಾರೆ, ಅವರು ಸರಿಯಾಗಿ ತಿಳಿಸಿಕೊಡಲು ಸಾಧ್ಯವಿಲ್ಲ. ಜ್ಞಾನಪೂರ್ಣರಾಗದಿರುವ ಕಾರಣ ಡಿಸ್ಸರ್ವಿಸ್ ಮಾಡುತ್ತಾರೆ. ಯಾರಲ್ಲಿ ಎಷ್ಟು ಜ್ಞಾನ ಇದೆ ಅಷ್ಟು ತಿಳಿಸಿಕೊಡುತ್ತಾರೆ. ನಂಬರ್ವಾರ್ ಅ0ತೂ ಇದ್ದಾರೆ. ತಪ್ಪುಗಳನ್ನೂ ಸಹ ಮಾಡುತ್ತಾರೆ. ನಾವು ದೇವತೆ ಆಗುತ್ತಿದ್ದೇವೆ ಎನ್ನುವ ನಶೆ ಮಕ್ಕಳಿಗೆ ಇರಬೇಕು. ನಾನು ಪತಿತರ ಜಗತ್ತಿನಲ್ಲಿ ಬರುತ್ತೇನೆ ಎ0ದು ತ0ದೆ ಸ್ವಯಂ ಹೇಳುತ್ತಾರೆ. ಸತ್ಯಯುಗದಲ್ಲಿ ಇವರೇ ನಾರಾಯಣ ಆಗಿದ್ದರು. ಈಗ ಪುನಃ ಇವರ ತನುವಿನಲ್ಲಿ ಬ0ದಿದ್ದೇನೆ. ಇವರನ್ನೇ ನರನಿ0ದ ನಾರಾಯಣ ಮಾಡುತ್ತೇನೆ. ನ0ಬರ್ವನ್ ಪೂಜ್ಯರೂ ಸಹ ಇವರೇ ಆಗಿದ್ದರು, ಈಗ ನ0ಬರ್ವನ್ ಪೂಜಾರಿಯೂ ಸಹ ಇವರೇ ಆಗಿದ್ದಾರೆ. ಪುನಃ ಇವರದೇ ಆಲ್ರೌ0ಡ್ ಪಾತ್ರ ಇದೆ. ಇದು ನನ್ನ ನಿಗದಿತ ತನು ಆಗಿದೆ. ಇದು ಬದಲಾವಣೆ ಆಗುವುದಿಲ್ಲ. ಬೇರೆಯವರಿಗೆ ಅವಕಾಶ ಕೊಡೋಣ ಎ0ದಿಲ್ಲ. ಈ ನಾಟಕ ಮಾಡಿ ಮಾಡಲ್ಪಟ್ಟಿದೆ. ಇದರಲ್ಲಿ ಬದಲಾವಣೆ ಆಗುವುದಿಲ್ಲ. ನಾನು ಬರುವುದು ಪತಿತರ ಜಗತ್ತಿನಲ್ಲಿ ಎ0ದು ಬಾಬಾ ಹೇಳುತ್ತಾರೆ, ಆದರೆ ಯಾರಿಗಾದರೂ ಪತಿತರು ಎ0ದು ಹೇಳಿದರೆ ಕೋಪ ಮಾಡಿಕೊಳ್ಳುತ್ತಾರೆ. ಭಗವಾನುವಾಚ ಏನೆಂದರೆ ಎಲ್ಲರೂ ಆಸುರೀ ಸ0ಪ್ರದಾಯದವರು ಇರುವಾಗ ಒಪ್ಪಿಕೊಳ್ಳಬೇಕಾಗುತ್ತದೆ. ಭಗವ0ತ ಅ0ದರೆ ನಿರಾಕಾರ, ಬ್ರಹ್ಮಾ, ವಿಷ್ಣು, ಶ0ಕರ, ಕೃಷ್ಣ ಅಲ್ಲ.. . ನಾನು ಪರಮಾತ್ಮನೂ ನಿಮ್ಮ ಹಾಗೆ ಇದ್ದೇನೆ ಎ0ದು ಹೇಳುತ್ತಾರೆ. ಭಗವಾನುವಾಚ ನಾನು ನಿಮಗೆ ರಾಜಯೋಗವನ್ನು ಕಲಿಸಲು ಬ0ದಿರುವೆನು. ಯೋಗದ ಮಹಿಮೆ ಎಷ್ಟು ಇದೆ. ಎಷ್ಟೊ0ದು ಯೋಗಾಶ್ರಮಗಳಿವೆ. ಅಲ್ಲಿ ಹಠಯೋಗ ಕಲಿಸುತ್ತಾರೆ. ಆದರೆ ನೀವು ಯೋಗಬಲದಿ0ದ ಇಡೀ ಜಗತ್ತನ್ನೇ ಸ್ವರ್ಗ ಮಾಡುತ್ತೀರಿ. ವಿಶ್ವವನ್ನು ಪರಿವರ್ತನೆ ಮಾಡುತ್ತೀರಿ. ಇಡೀ ಜಗತ್ತಿನವರು ಯೋಗದಲ್ಲಿ ಇರುವುದಿಲ್ಲ, ಯೋಗದ ಮಹಿಮೆ ಎಷ್ಟು ಇದೆ, ಇದರಿ0ದ ವಿಶೇಷವಾಗಿ ಭಾರತ ಸ್ವರ್ಗ ಆಗುತ್ತದೆ. ಆದರೆ ಇದನ್ನು ಯಾರು ಸ್ವರ್ಗ ಮಾಡಿದರು? ಎನ್ನುವುದು ಯಾರಿಗೂ ಗೊತ್ತಿಲ್ಲ. ಈ ರೀತಿ ಸ್ವರ್ಗವನ್ನಾಗಿ ಮಾಡುವವರು ಯಾರಾದರೂ ಇರಬಹುದು. ನಾನೇ ಬಂದು ದೇವತೆ ಆಗುವಂತಹ ಕರ್ಮ ಕಲಿಸುತ್ತೇನೆ ಎಂದು ತಂದೆ ಹೇಳುತ್ತಾರೆ. ಇದಂತೂ ಬಹಳ ಸಹಜವಾಗಿದೆ. ಅವರು ಬಹಳ ಯಜ್ಞಗಳನ್ನು ಮಾಡುತ್ತಾರೆ. ಇಲ್ಲಿ ನೀವು ಯಜ್ಞ, ಹೋಮ ಇತ್ಯಾದಿ ಮಾಡುತ್ತೀರಾ? ಧೂಪವನ್ನೂ ಸುವಾಸನೆಗಾಗಿ ಹಚ್ಚುತ್ತಾರೆ. ಇಲ್ಲಿ ಕರ್ಮ ಕಾಂಡದ ಯಾವ ಮಾತೂ ಇಲ್ಲ. ನಾನು ಆತ್ಮ ಆಗಿದ್ದೇನೆ ಯಾವ ರೀತಿ ನೀವು ಇರುವಿರಿ ಎಂದು ತಂದೆ ತಮ್ಮ ಪರಿಚಯ ಕೊಡುತ್ತಾರೆ. ಆದರೆ ನಾನು ಪುನರ್ಜನ್ಮ ಪಡೆಯುವುದಿಲ್ಲ. ಜನ್ಮ ತೆಗೆದುಕೊಳ್ಳುತ್ತೇನೆ ಆದರೆ ಮರಣ ಇಲ್ಲ, ನನ್ನ ಜಯಂತಿ ಆಚರಿಸುತ್ತಾರೆ. ನಾನು ಈ ತನುವಿನಲ್ಲಿ ಓದಿಸಲು ಬರುವುದು ಹೋಗುವುದು ಮಾಡುತ್ತೇನೆ, ಇದಕ್ಕೆ ಮೃತ್ಯು ಎಂದು ಹೇಳುವುದಿಲ್ಲ. ದೇವತೆಗಳನ್ನಾಗಿ ಮಾಡಲು ನಾನು ಬರುತ್ತೇನೆ. ಇಲ್ಲಿ ಬಂದು ಓದುತ್ತಾರೆ, ಕಲ್ಪದ ಹಿಂದೆ ಓದಿದವರೇ ಓದುತ್ತಾರೆ. ಬಹಳ ಕಾಲದಿಂದ ಅಗಲಿ ಸಿಕ್ಕಿರುವ ಮಕ್ಕಳಿದ್ದಾರೆ, ಬೇರೆ ಯಾರಾದರೂ 84 ಜನ್ಮಗಳನ್ನು ಪಡೆಯುವರೇನು, ನಾವೇ ಪೂರ್ಣ 84 ಜನ್ಮಗಳ ಚಕ್ರವನ್ನು ಸುತ್ತು ಹಾಕುತ್ತೇವೆ.

ಮನುಷ್ಯರಂತೂ ಬಹಳ ಜನ್ಮ ತೆಗೆದುಕೊಳ್ಳುವುದರಿಂದ ಸುಸ್ತಾಗಿಬಿಡುತ್ತಾರೆ, 84 ಜನ್ಮಗಳ ಚಕ್ರದಲ್ಲಿ ಬರಲು ನಮಗೆ ಇಷ್ಟ ಇಲ್ಲ ಎಂದು ನಿಮಗೆ ಹೇಳುತ್ತಾರೆ. ಅದರೆ ನಾವು ಇನ್ನೂ ಖುಷಿ ಪಡುತ್ತೇವೆ ಅಂದರೆ ನಾವು ಎಷ್ಟು ಶಕ್ತಿವಂತ ಆಗಿದ್ದೇವೆ. ನಾವು ಈ 84 ಜನ್ಮಗಳ ಚಕ್ರವನ್ನು ನೆನಪು ಮಾಡುತ್ತಾ ಮಾಡುತ್ತಾ ಚಕ್ರವರ್ತಿ ರಾಜರಾಗುತ್ತೇವೆ. ಅವರ ಬಾವುಟದಲ್ಲಿಯೂ ಚಕ್ರ ಇದೆ, ಮತ್ತು ಅವರು ಚರಕ ಮಾಡಿದ್ದಾರೆ. ಅವರಿಗಿಂತ ನಿಮ್ಮ ಮುದ್ರೆ ಸರಿಯಾಗಿದೆ. ಮೇಲೆ ಶಿವಬಾಬಾ, ಕೆಳಗೆ ತ್ರಿಮೂರ್ತಿ ಮತ್ತು ಚಕ್ರ ಬಹಳ ಸರಿಯಾಗಿ ಇದೆ. ನಿಮ್ಮ ಈ ಶಿವನ ಬಾವುಟ ಬಹಳ ಸರಿಯಾಗಿದೆ.

ಎರಡು ಪ್ರಕಾರದ ಸನ್ಯಾಸವಾಗಿದೆ ಎ೦ದು ನಿಮಗೆ ತಿಳಿಸಲಾಗಿದೆ. ಒಂದಾಗಿದೆ ಕಾಡಿನಲ್ಲಿರುವವರ ನಿವೃತ್ತಿ ಮಾರ್ಗದ ಸನ್ಯಾಸ, ಅದಾಗಿದೆ ಅರ್ಧ ಸನ್ಯಾಸ. ನಿಮ್ಮದು ಪೂರ್ಣ ಸನ್ಯಾಸ ಆಗಿದೆ. ಎಂತಹದು? ಇಡೀ ಆಸುರೀ ಜಗತ್ತಿನ ಸನ್ಯಾಸ ಮಾಡುತ್ತೀರಿ ನನ್ನ ಪತಿ, ನನ್ನ ಮಕ್ಕಳು, ನನ್ನ ಗುರು. . . ಆ ಎಲ್ಲ ನನ್ನ ನನ್ನದರೊಂದಿಗಿನ ಬುದ್ಧಿಯೋಗವನ್ನು ತೆಗೆದುಹಾಕುತ್ತೀರಿ. ನನ್ನವರು ಶಿವಬಾಬಾ ಒಬ್ಬರೇ ಬೇರೆ ಯಾರೂ ಇಲ್ಲ. ಇಂತಹ ಅವಸ್ಥೆ ಆಗುವವರೆಗೆ ಬಿರುಗಾಳಿ ಬರುತ್ತಿರುತ್ತದೆ. ತಂದೆ ಆಸುರೀ ಜಗತ್ತಿನ ಸನ್ಯಾಸ ಮಾಡಿಸುತ್ತಾರೆ ಏಕೆಂದರೆ ಇದೆಲ್ಲವೂ ಭಸ್ಮ ಆಗುವುದಿದೆ. ಎಲ್ಲವೂ ಭಸ್ಮ ಆಗುತ್ತದೆ ಎಂದು ಅವರು ಹೇಳುವುದಿಲ್ಲ. ನೀವು ಇರುವುದು ಸಂಬಂಧಿಗಳ ಮಧ್ಯೆ ಆದರೆ ಅವರನ್ನು ನೋಡುತ್ತಿದ್ದರೂ ಬುದ್ಧಿಯಿಂದ ನೆನಪು ಮಾಡಬಾರದು. ನನ್ನದೇನೂ ಇಲ್ಲ ಅಂದಮೇಲೆ ಕಾಮ ಕ್ರೋಧ ಯಾರ ಬಳಿ ಇರಲು ಸಾಧ್ಯ! ಈ ಯುಕ್ತಿ ಬಹಳ ಚೆನ್ನಾಗಿದೆ, ಆದರೆ ಬುದ್ಧಿಯಲ್ಲಿಅದು ಸ್ಥಿರವಾಗಿರಬೇಕು. ಇದಕ್ಕೆ ರಾಜಯೋಗ ಎಂದು ಹೇಳಲಾಗುತ್ತದೆ. ನೀವು ಯೋಗ ಜೋಡಿಸುತ್ತೀರಿ, ರಾಜ್ಯ ಪಡೆಯುತ್ತೀರಿ. ಅದಕ್ಕೆ ಹಠಯೋಗ ಎಂದು ಹೇಳಲಾಗುತ್ತದೆ. ಇದು ಗುಹ್ಯ ಮಾತಾಗಿದೆ. ಜಗತ್ತಿನಲ್ಲಿ ಅನೇಕ ಯೋಗಿಗಳಿದ್ದಾರೆ. ಆದರೆ ಬಾಬಾ ಹೇಳುತ್ತಾರೆ ಒಬ್ಬರ ಯೋಗವೂ ನನ್ನ ಜೊತೆ ಇಲ್ಲ. ನನ್ನ ಬದಲು ನನ್ನ ನಿವಾಸ ಸ್ಥಾನ ಬ್ರಹ್ಮ ತತ್ವದ ಜೊತೆ ಯೋಗ ಇದೆ. ಭಾರತವಾಸಿಗಳು ತಮ್ಮ ನಿವಾಸ ಸ್ಥಾನ, ಹಿ೦ದುಸ್ಥಾನವನ್ನು ತಮ್ಮ ಧರ್ಮ ಎಂದು ತಿಳಿದಿರುವರು. ಅದೇ ರೀತಿ ಅವರು ತಮ್ಮನ್ನು ತಾವು ಬ್ರಹ್ಮನ ಮಕ್ಕಳು ಎಂದು ತಿಳಿದಿರುವರು. ಮಕ್ಕಳು ಎಂದೂ ಹೇಳುವುದಿಲ್ಲ. ಮಕ್ಕಳು ಎ೦ದು ಹೇಳಿದರೆ ಆಸ್ತಿಯೂ ಸಹ ಬೇಕು. ಅವರು ತತ್ವದಲ್ಲಿ ಲೀನ ಆಗುತ್ತೇವೆ ಎಂದು ಹೇಳುತ್ತಾರೆ. ಬ್ರಹ್ಮಾಬಾಬಾರವರಿಗ೦ತೂ ಅನುಭವ ಇದೆ. ಅನೇಕ ಸನ್ಯಾಸಿ, ಗುರುಗಳಿಂದ ಅನುಭವ ಇದೆ. ಅರ್ಜುನನಿಗೂ ಅನೇಕ ಗುರುಗಳಿದ್ದರು ಎ೦ದು ಹೇಳುತ್ತಾರೆ. ನೀವೆಲ್ಲರೂ ಅರ್ಜುನರಾಗಿರುವಿರಿ. ಈ ಸಮಯದಲ್ಲಿ ಇಡೀ ಜಗತ್ತಿನಲ್ಲಿ ರಾವಣನರಾಜ್ಯ ಇದೆ, ಜಗತ್ತೇ ಲಂಕೆ ಆಗಿದೆ. ಒಂದು ಸಿಲೋನ್ ಲಂಕಾ ದ್ವೀಪ ಅಲ್ಲ. ಅದಂತೂ ಸೀಮಿತವಾದ ಲಂಕೆ ಆಗಿದೆ, ಆದರೆ ಈ ಸಮಯದಲ್ಲಿ ಅಂತೂ ಪೂರ್ಣ ಜಗತ್ತೇ ಬೇಹದ್ದಿನ ಲಂಕೆ ಆಗಿದೆ. ಈಗ ಜಗತ್ತಿನಲ್ಲಿ ರಾವಣರಾಜ್ಯ ಇದೆ. ರಾಮರಾಜ್ಯದಲ್ಲಿ ಇಷ್ಟು ಮನುಷ್ಯರು ಇರಲಿಲ್ಲ. ರಾಮರಾಜ್ಯ ಇದ್ದಾಗ ರಾವಣರಾಜ್ಯ ಇರಲಿಲ್ಲ. ಎಲ್ಲಿ ಹೋಗುತ್ತದೆ? ಕೆಳಗೆ ಪಾತಾಳದಲ್ಲಿ ಹೋಗುತ್ತದೆ. ಪುನಃ ರಾವಣರಾಜ್ಯ ಬಂದಾಗ ರಾಮರಾಜ್ಯ ಕೆಳಗೆ ಹೋಗಿಬಿಡುತ್ತದೆ. ಇದು ನಾಟಕ ಆಗಿದೆ ಅಲ್ಲವೆ. ಚಕ್ರದಲ್ಲಿ ಸತ್ಯಯುಗ ಮೇಲೆ ಬರುತ್ತದೆ. ದ್ವಾಪರ, ಕಲಿಯುಗ ಕೆಳಗೆ ಬಂದಾಗ ಸತ್ಯಯುಗ ತ್ರೇತಾ ಕೆಳಗೆ ಹೋಗುತ್ತದೆ. ಇದು ಚಕ್ರದ ಮಾತು, ಅವರು ಈ ರೀತಿ ಬರೆದು ಇಟ್ಟಿದ್ದಾರೆ. ಯಾವುದೂ ಸಾಗರದಲ್ಲಿ ಹೋಗುವುದಿಲ್ಲ ಅಥವಾ ಸಾಗರದಿಂದ ಯಾವುದೂ ಮೇಲೆ ಬರುವುದೂ ಇಲ್ಲ.

ಇದು ಬಹಳ ಗುಹ್ಯವಾದ ತಿಳಿದುಕೊಳ್ಳುವ೦ತಹ ಮಾತು ಎ೦ದು ತ೦ದೆ ಹೇಳುತ್ತಾರೆ. ಇದರಲ್ಲಿ ಮೊದಲು ಪವಿತ್ರತೆ ಬೇಕು ಮತ್ತು ಯೋಗ ಪಕ್ಕಾ ಆಗಿರಬೇಕು. ಇದಕ್ಕೆ ಸ೦ಪೂರ್ಣ ಪವಿತ್ರತೆ ಎ೦ದು ಹೇಳಲಾಗುತ್ತದೆ. ಈ ಜಗತ್ತಿನಿ೦ದ ಬುದ್ಧಿಯೋಗ ಮುಗಿಯಿತು. ಈ ಮಾತುಗಳನ್ನು ನಿಮ್ಮಲ್ಲಿಯೂ ಕೆಲವರು ತಿಳಿದುಕೊಳ್ಳುತ್ತಾರೆ. ಎಲ್ಲರೂ ತಿಳಿದುಕೊ೦ಡರೆ ಜ್ಞಾನ ಗ೦ಗೆಯರಾಗುತ್ತಿದ್ದರು. ಚಿಕ್ಕ ನದಿಗಳಾಗುತ್ತಿದ್ದರು, ಕಾಲುವೆ ಆಗುತ್ತಿದ್ದರು. ಒಳ್ಳೆಯ ಕೊಳ ಆಗಿ ಮನೆಯಲ್ಲಿ ಹೇಳಿದರೂ ಸ್ವಲ್ಪವಾದರು ತಿಳಿದುಕೊ೦ಡಿದ್ದಾರೆ ಎನ್ನಬಹುದು. ಆದರೆ ಮನೆಯಲ್ಲಿಯೂ ಹೇಳುವುದಿಲ್ಲ. ಎಷ್ಟೇ ಬಡವರಿದ್ದರೂ ಮನೆಯಲ್ಲಿ ಗೀತಾ ಪಾಠಶಾಲೆ ತೆರೆಯಲು ಸಾಧ್ಯವಿದೆ ಎ೦ದು ತ೦ದೆ ಹೇಳುತ್ತಾರೆ. ಒ೦ದೇ ಕೋಣೆ ಇರಬಹುದು. ಅಲ್ಲಿಯೇ ಉಣ್ಣುವುದು, ಮಲಗುವುದು ಮಾಡುತ್ತಿರಬಹುದು. ಒಳ್ಳೆಯದು ಕೆಲಸ ಮುಗಿದ ಮೇಲೆ ಸ್ವಚ್ಛ ಮಾಡಿ ನ೦ತರ ಕ್ಲಾಸ್ ಮಾಡಬಹುದು. ಮೂರು ಹೆಜ್ಜೆ ಭೂಮಿಯಲ್ಲಿ ಆಸ್ಪತ್ರೆ ತೆರೆಯಲು ಸಾಧ್ಯ ಇದೆ. ಸಾಹುಕಾರತನದ ಮಾತು ಬಿಡಿ. ತ೦ದೆ ಬಡವರ ಬ೦ಧು ಆಗಿದ್ದಾರೆ. ಸಾಹುಕಾರರು ನಮಗೆ ಇಲ್ಲಿಯೇ ಸ್ವರ್ಗ ಇದೆ ಎ೦ದು ಹೇಳುತ್ತಾರೆ. ಆಗ ಬಾಬಾ ಹೇಳುತ್ತಾರೆ ಒಳ್ಳೆಯದು ನೀವು ನಿಮ್ಮ ಸ್ವರ್ಗದಲ್ಲಿ ಸ೦ತೋಷದಿ೦ದ ಇರಿ. ನಾನು ನಿಮಗೆ ಏನು ಕೊಡಲಿ. ದಾನವನ್ನೂ ಸಹ ಬಡವರಿಗೇ ಕೊಡುತ್ತಾರೆ. ದೊಡ್ಡ ಮನುಷ್ಯರು ಇಲ್ಲಿ ನೆಲದ ಮೇಲೆ ಕುಳಿತುಕೊಳ್ಳಲು ಹೆದರುತ್ತಾರೆ. ಅದಕ್ಕೆ ಬಾಬಾ ಹೇಳುತ್ತಾರೆ ಸರಿ ನಿಮ್ಮ ಮಹಲಿನಲ್ಲಿರಿ. ನನ್ನ ಬಳಿ ಅ೦ತೂ ಚೆನ್ನಾಗಿ ಓದುವ೦ತಹ ಬಡವರೇ ಬರಬೇಕು. ಬೇರೆಯವರಿಗೆ ಹೇಳದಿದ್ದರೆ ಸಣ್ಣ ಕೆರೆಯೂ ಆಗಲಿಲ್ಲ. ನೀವ೦ತೂ ದೊಡ್ಡ ನದಿ ಆಗಬೇಕು. ಮಮ್ಮಾ ಬಾಬಾರವರನ್ನು ಅನುಸರಿಸಬೇಕು. ಆದರೆ ಮನೆಯಲ್ಲಿಯೂ ತಿಳಿಸಿಕೊಡದಿದ್ದರೆ ಹರಿಯುವ ನೀರೂ ಸಹ ಆಗಲಿಲ್ಲ. ಬಾಬಾರವರಿಗೆ ಮಜಾ ಬರುವುದು ಜ್ಞಾನ ಗ೦ಗೆಯರ ಮು೦ದೆ. ಬಾಬಾರವರ ಸನ್ಮುಖದಲ್ಲಿ ಕೇಳಿದಾಗ ಅನೇಕರು ಖುಷಿ ಆಗುತ್ತಾರೆ. ಆದರೆ ಇಲ್ಲಿ೦ದ ಎದ್ದು ಮೆಟ್ಟಿಲು ಇಳಿಯುತ್ತಿದ್ದ೦ತೆ ನಶೆಯೂ ಇಳಿದುಬಿಡುತ್ತದೆ. ನ೦ತರ ಮನೆಗೆ ಹೋದ ಮೇಲೆ ಪುನಃ ಅದೇ ಪರಚಿ೦ತನೆ ಆರ೦ಭವಾಗುತ್ತದೆ. ತಂದೆ ಚಲನೆವಲನೆಯಿ೦ದ ತಿಳಿದುಕೊ೦ಡುಬಿಡುತ್ತಾರೆ. ಮಿಲನ ಮಾಡಲು ಬರುತ್ತಾರೆ. ನನ್ನ ಪತಿ ನನ್ನ ಮಗ ಎ೦ದು ಹೇಳುತ್ತಾರೆ. ಅರೇ, ನಿಮಗೆ ಪತಿ ಎಲ್ಲಿ೦ದ ಬ೦ದರು? ಸ್ವರ್ಗಕ್ಕೆ ಹೋಗಲು ಬರುತ್ತೀರಿ ಆದರೂ ನನ್ನದು ನನ್ನದು

ಎನ್ನುವುದರಲ್ಲಿ ಸಿಕ್ಕಿ ಹಾಕಿಕೊ0ಡಿರುವಿರಿ. ಒಳ್ಳೆಯದು ಇಷ್ಟು ಡೋಜ್ ಸಾಕು. ಎಷ್ಟು ಜೀರ್ಣ ಆಗುತ್ತದೋ ಅಷ್ಟೇ ಕೊಡಬೇಕು. ತಂದೆ ಸ0ಕ್ಷಿಪ್ತದಲ್ಲಿ ತಿಳಿಸಿದ್ದಾರೆ. ಯೋಗದಿ0ದ ನೀವು ಸ್ವರ್ಗದ ಸ್ಥಾಪನೆ ಮಾಡಿತ್ತಿರುವಿರಿ. ರಾಜರಾಗಲು ಜ್ಞಾನ ಬೇಕು. ಎರಡು ವಿಷಯಗಳಿವೆ. ತಂದೆಯೂ (ಬ್ರಹ್ಮಾತಂದೆ) ಸಹ ಯೋಗದಲ್ಲಿರುವ ಪುರುಷಾರ್ಥ ಮಾಡುತ್ತಾರೆ. ಆದ್ದರಿ0ದಲೇ ಹೇಳುತ್ತಾರೆ - ಮರೆಯ ಬೇಡಿರಿ ನೆನಪು ಮಾಡಬೇಡಿರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ಈ ಹಳೆಯ ಜಗತ್ತಿನ ಪೂರ್ಣ ಸನ್ಯಾಸ ಮಾಡಬೇಕು. ಪವಿತ್ರತೆ ಮತ್ತು ಯೋಗದ ವಿಷಯದಲ್ಲಿ ಮೊದಲಿನ ನ0ಬರ್ ತೆಗೆದುಕೊಳ್ಳಬೇಕು.

2. ಜ್ಞಾನ ಗ0ಗೆಯರಾಗಿ ಪತಿತರನ್ನು ಪಾವನ ಮಾಡುವ ಸೇವೆ ಮಾಡಬೇಕು. ಮಮ್ಮಾ ಬಾಬಾರವರನ್ನು ಅನುಸರಿಸಿ ದೊಡ್ಡ ನದಿ ಆಗಬೇಕು.

ವರದಾನ: ಬ್ರಾಹ್ಮಣ ಜೀವನದಲ್ಲಿ ಕಡಿಮೆ ಖರ್ಚು ಶ್ರೇಷ್ಠ ಸ್ಥಿತಿಯಾಗಿ ಮಾಡುವಂತಹ ಅಲೌಕಿಕ ಸಂಪನ್ನ ಭವ.
ಈ ಅಲೌಕಿಕ ಬ್ರಾಹಣ ಜೀವನದ ವಿಶೇಷ ಸ್ಲೋಗನ್ ಆಗಿದೆ "ಕಡಿಮೆ ಖರ್ಚು ಶ್ರೇಷ್ಠ ಸ್ಥಿತಿ" ಖರ್ಚು ಕಡಿಮೆ ಆಗಲಿ ಆದರೆ ಪ್ರಾಪ್ತಿ ಸಾಮರ್ಥ್ಯವುಳ್ಳದ್ದಾಗಿರಲಿ ಅರ್ಥಾತ್ ಫಲಿತಾಂಶ ಒಳ್ಳೆಯದರಲ್ಲಿ ಒಳ್ಳೆಯದಾಗಿರಲಿ. ಅಲೌಕಿಕ ಸಂಪನ್ನ ಜೀವನ ಆಗ ಹೇಳಲಾಗುವುದು ಯಾವಾಗ ಮಾತಿನಲ್ಲಿ, ಕರ್ಮದಲ್ಲಿ ಖರ್ಚು ಕಡಿಮೆ ಇರಲಿ. ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸವಾಗಬೇಕು, ಕಡಿಮೆ ಮಾತಿನಲ್ಲಿ ಸ್ಪಷ್ಟೀಕರಣ ಹೆಚ್ಚಿರಲಿ, ಸಂಕಲ್ಪ ಕಡಿಮೆಯಿರಲಿ ಆದರೆ ಶಕ್ತಿಶಾಲಿಯಾಗಿರಲಿ - ಇದಕ್ಕೆ ಹೇಳಲಾಗುವುದು ಕಡಿಮೆ ಖರ್ಚು ಶ್ರೇಷ್ಠ ಸ್ಥಿತಿ. ಯಾರು ಸರ್ವ ಖಜಾನೆಯನ್ನು ಕಡಿಮೆ ಖರ್ಚು ಮಾಡುತ್ತಾರೆ ಅವರ ಭಂಢಾರ ಭರ್ಪೂರ್ ಆಗಿ ಬಿಡುವುದು.

ಸ್ಲೋಗನ್: ತಂದೆ ಮತ್ತು ಸೇವೆಯಲ್ಲಿ ಸತ್ಯ ಪ್ರೀತಿ ಇದ್ದಾಗ ಪರಿವಾರದ ಪ್ರೀತಿ ಸ್ವತಃವಾಗಿ ಸಿಗುವುದು.

ಮಾತೇಶ್ವರಿಜೀಯವರ ಅಮೂಲ್ಯ ಮಹಾವಾಕ್ಯ

ಈಗ ಶಿರೋಮಣಿ ಗೀತೆಯಲ್ಲಿ ಭಗವಾನುವಾಚ ಏನಿದೆ - ಮಕ್ಕಳೇ, ಎಲ್ಲಿ ವಿಜಯ ಇದೆಯೋ ಅಲ್ಲಿ ನಾನಿದ್ದೇನೆ, ಇದು ಸಹ ಪರಮಾತ್ಮನ ಮಹಾವಾಕ್ಯವಾಗಿದೆ. ಪರ್ವತಗಳಲ್ಲಿ ಹಿಮಾಲಯ ಪರ್ವತ ಏನಿದೆ ಅದರಲ್ಲಿ ನಾನಿರ್ದ್ದೇನೆ ಹಾಗೂ ಸರ್ಪಗಳಲ್ಲಿ ಕಾಳಿಂಗ ನಾಗ ನಾನಾಗಿದ್ದೇನೆ. ಆದ್ದರಿಂದ ಪರ್ವತಗಳಲ್ಲಿ ಎತ್ತರವಾದ ಪರ್ವತ ಕೈಲಾಸ ಪರ್ವತವನ್ನು ತೋರಿಸುತ್ತಾರೆ ಹಾಗೂ ಸರ್ಪಗಳಲ್ಲಿ ಕಾಳಿಂಗ ನಾಗ, ಹಾಗಾದರೆ ಇದರಿಂದ ಸಿದ್ಧವಾಗುತ್ತದೆ ಪರಮಾತ್ಮ ಒಂದು ವೇಳೆ ಸರ್ವ ಸರ್ಪಗಳಲ್ಲೂ ಕೇವಲ ಕಾಳಿಂಗ ನಾಗದಲ್ಲಿದ್ದಾರೆ ಎಂದರೆ ಸರ್ವ ಸರ್ಪಗಳಲ್ಲಿ ಅವರ ವಾಸ ಇಲ್ಲವೆಂದು. ಒಂದು ವೇಳೆ ಪರಮಾತ್ಮ ಎಲ್ಲದಕ್ಕಿಂತ ಎತ್ತರವಾದ ಪರ್ವತದಲ್ಲಿದ್ದಾರೆ ಎಂದರೆ ಕೆಳಗಿನ ಪರ್ವತಗಳಲ್ಲಿ ಇಲ್ಲವೆಂದು ಹಾಗೂ ಮತ್ತು ಹೇಳುತ್ತಾರೆ ಎಲ್ಲಿ ವಿಜಯವಿದೆಯೋ ಅಲ್ಲಿ ಜನ್ಮವೆಂದು ಅಂದರೆ ಸೋಲಿನಲ್ಲಿ ನಾನಿಲ್ಲ. ಈಗ ಈ ಮಾತುಗಳು ಸಿದ್ಧ ಮಾಡುತ್ತದೆ ಪರಮಾತ್ಮ ಸರ್ವವ್ಯಾಪಿ ಅಲ್ಲವೆಂದು. ಒಂದು ಕಡೆ ಈ ರೀತಿಯೂ ಹೇಳುತ್ತಾರೆ ಹಾಗೂ ಇನ್ನೊಂದು ಕಡೆ ಆ ರೀತಿಯು ಹೇಳುತ್ತಾರೆ - ಪರಮಾತ್ಮ ಅನೇಕ ರೂಪಗಳಲ್ಲಿ ಬರುತ್ತಾರೆ, ಪರಮಾತ್ಮನನ್ನು 24 ಅವತಾರಗಳಲ್ಲಿ ತೋರಿಸಿದ್ದಾರೆ, ಹೇಳುತ್ತಾರೆ ಮೀನು, ಮೊಸಳೆ ಇತ್ಯಾದಿ ಎಲ್ಲಾ ರೂಪ ಪರಮಾತ್ಮನದ್ದೇ ಆಗಿದೆ. ಈಗ ಇದಾಗಿದೆ ಅವರ ಮಿಥ್ಯ ಜ್ಞಾನ. ಸುಮ್ಮನೆ ಪರಮಾತ್ಮನನ್ನು ಸರ್ವತ್ರ ಎಂದು ತಿಳಿದು ಕುಳಿತಿದ್ದಾರೆ ಹಾಗೆ ನೋಡಿದರೆ ಈ ಕಲಿಯುಗದ ಸಮಯದಲ್ಲಿ ಮಾಯೆಯೇ ಸರ್ವತ್ರ ವ್ಯಾಪಕವಾಗಿದೆ ಎಂದ ಮೇಲೆ ಪರಮಾತ್ಮ ವ್ಯಾಪಕರಾಗಲು ಹೇಗೆ ಸಾಧ್ಯ? ಗೀತೆಯಲ್ಲಿಯೂ ಸಹ ಹೇಳುತ್ತಾರೆ - ನಾನು ಮಾಯೆಯ ಮೇಲೆ ವ್ಯಾಪಕನಾಗಿಲ್ಲ, ಇದರಿಂದ ಸಿದ್ಧವಾಗುತ್ತದೆ ಪರಮಾತ್ಮ ಸರ್ವತ್ರರಲ್ಲ ಎಂದು.

2. ಈಗ ಇದಂತೂ ನಾವು ತಿಳಿದುಕೊಂಡಿದ್ದೇವೆ ಯಾವಾಗ ನಾವು ನಿರಾಕಾರಿ ಪ್ರಪಂಚ ಎಂದು ಹೇಳುತ್ತೇವೆ ಎಂದರೆ ನಿರಾಕಾರದ ಅರ್ಥ ಅದರ ಆಕಾರವಿಲ್ಲ ಎಂದಲ್ಲ, ಆದರೆ ಅದರ ಸ್ಥೂಲ ಸೃಷ್ಟಿಯ ತರಹ ಆಕಾರವಿಲ್ಲ, ಈ ರೀತಿ ಪರಮಾತ್ಮ ನಿರಾಕಾರನಾಗಿದ್ದಾರೆ ಆದರೆ ಅವರ ಸೂಕ್ಷ್ಮ ರೂಪ ಅವಶ್ಯವಾಗಿದೆ. ಹಾಗಾದರೆ ನಾವು ಆತ್ಮ ಹಾಗೂ ಪರಮಾತ್ಮನ ಧಾಮ ನಿರಾಕಾರಿ ಪ್ರಪಂಚವಾಗಿದೆ. ನಾವು ಯಾವಾಗ ಪ್ರಪಂಚ ಎಂದು ಹೇಳುತ್ತೇವೆ ಇದರಿಂದ ಸಿದ್ಧವಾಗುತ್ತದೆ ಅದು ಒಂದು

ಪ್ರಪಂಚವಾಗಿದೆ ಅಲ್ಲೂ ಇರುತ್ತಾರೆ ಆಗಲೇ ಪ್ರಪಂಚ ಎಂದು ಹೆಸರು ಇಟ್ಟಿದ್ದಾರೆ ಈಗ ಪ್ರಾಪಂಚಿಕ ಜನರಂತೂ ತಿಳಿದುಕೊಳ್ಳುತ್ತಾರೆ ಪರಮಾತ್ಮನ ರೂಪವು ಅಖಂಡ ಜ್ಯೋತಿ ತತ್ವವಾಗಿದೆ, ಆದರೆ ಅದಾಗಿದೆ ಪರಮಾತ್ಮನ ಇರುವ ಜಾಗ, ಯಾವುದಕ್ಕೆ ರಿಟೈರ್ಡ್ ಹೋಂ ಎಂದು ಹೇಳುತ್ತಾರೆ ಹಾಗಾದರೆ ನಾವು ಪರಮಾತ್ಮನ ಮನೆಯನ್ನು ಪರಮಾತ್ಮ ಎಂದು ಹೇಳಲು ಸಾಧ್ಯವಿಲ್ಲ. ಈಗ ಎರಡನೆಯದಾಗಿದೆ ಆಕಾರಿ ಪ್ರಪಂಚ ಎಲ್ಲಿ ಬ್ರಹ್ಮ ವಿಷ್ಣು ಶಂಕರ ದೇವತೆಯರು ಆಕಾರಿ ರೂಪದಲ್ಲಿರುತ್ತಾರೆ ಹಾಗೂ ಇದಾಗಿದೆ ಸಾಕಾರಿ ಪ್ರಪಂಚ, ಯಾವುದಕ್ಕೆ ಎರಡು ಭಾಗವಿದೆ - ಒಂದಾಗಿದೆ ನಿರ್ವಿಕಾರಿ ಸ್ವರ್ಗದ ಪ್ರಪಂಚ ಎಲ್ಲಿ ಅರ್ಧ ಕಲ್ಪ ಸರ್ವದಾ ಸುಖವಿರುತ್ತದೆ, ಪವಿತ್ರತೆ ಹಾಗೂ ಶಾಂತಿ ಇರುತ್ತದೆ. ಎರಡನೆಯದಾಗಿದೆ ವಿಕಾರಿ ಕಲಿಯುಗೀ ದುಃಖ ಹಾಗು ಅಶಾಂತಿಯ ಪ್ರಪಂಚ ಈಗ ಅವೆರಡನ್ನು ಪ್ರಪಂಚ ಎಂದು ಏಕೆ ಹೇಳುತ್ತಾರೆ? ಏಕೆಂದರೆ ಮನುಷ್ಯರು ಏನು ಹೇಳುತ್ತಾರೆ - ಸ್ವರ್ಗ ಹಾಗೂ ನರಕ ಎರಡೂ ಪರಮಾತ್ಮನ ರಚನೆ ಮಾಡಿರುವ ಪ್ರಪಂಚಗಳಾಗಿವೆ, ಇದರ ಮೇಲೆ ಪರಮಾತ್ಮನ ಮಹಾವಾಕ್ಯವಾಗಿದೆ - ಮಕ್ಕಳೇ ನಾನು ಯಾವುದೇ ದುಃಖದ ಪ್ರಪಂಚವನ್ನು ರಚನೆ ಮಾಡಿಲ್ಲ. ನಾನು ಯಾವ ಪ್ರಪಂಚವನ್ನು ರಚಿಸಿದ್ದೇನೆ ಅದು ಸುಖದ ಪ್ರಪಂಚವಾಗಿದೆ. ಈಗ ಯಾವ ಈ ದುಃಖ ಹಾಗೂ ಅಶಾಂತಿಯ ಪ್ರಪಂಚವಿದೆ ಅದನ್ನು ಮನುಷ್ಯಾತ್ಮರು ತಮ್ಮನ್ನು ತಾವು ಹಾಗೂ ನಾನು ಪರಮಾತ್ಮನನ್ನು ಮರೆತು ಹೋಗಿರುವ ಕಾರಣ ಈ ಲೆಕ್ಕಾಚಾರವನ್ನು ಭೋಗಿಸುತ್ತಿದ್ದಾರೆ. ಬಾಕಿ ಈ ರೀತಿಯಲ್ಲ ಯಾವ ಸಮಯ ದುಃಖ ಹಾಗೂ ಪುಣ್ಯದ ಪ್ರಪಂಚವಿತ್ತು ಅಲ್ಲಿ ಯಾವುದೇ ಸೃಷ್ಟಿ ನಡೆಯುವುದಿಲ್ಲ. ಹಾ ಅವಶ್ಯವಾಗಿ ಯಾವಾಗ ನಾವು ಹೇಳುತ್ತೇವೆ - ಅಲ್ಲಿ ದೇವತೆಯರ ನಿವಾಸ ಸ್ಥಾನವಾಗಿತ್ತು ಎಂದ ಮೇಲೆ ಅಲ್ಲಿ ಎಲ್ಲಾ ಪ್ರವೃತ್ತಿಯು ನಡೆಯುತ್ತಿತ್ತು. ಆದರೆ ಅಲ್ಲಿ ವಿಕಾರಗಳ ಜನ್ಮ ಇರಲಿಲ್ಲ ಯಾವುದೇ ಕಾರಣದಿಂದ ಇಷ್ಟೊಂದು ಕರ್ಮ ಬಂಧನವೂ ಇರಲಿಲ್ಲ. ಆ ಪ್ರಪಂಚವನ್ನು ಕರ್ಮಬಂಧನ ರಹಿತ ಸ್ವರ್ಗದ ಪ್ರಪಂಚ ಎಂದು ಹೇಳಲಾಗುತ್ತದೆ. ಹಾಗಾದರೆ ಒಂದಾಗಿದೆ ನಿರಾಕಾರಿ ಪ್ರಪಂಚ ಎರಡನೆಯದು ಆಕಾರಿ ಪ್ರಪಂಚ, ಮೂರನೆಯದು ಸಾಕಾರಿ ಪ್ರಪಂಚ. ಒಳ್ಳೆಯದು. ಓಂ ಶಾಂತಿ.